ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: | ದಿನಾಂಕ : DATE : 10/1/21

# ಬಸ್ ನಿಲ್ಲಿಸದ ಕೆಎಸ್‌ಆರ್‌ಟಿಸಿ ಚಾಲಕನಿಗೆ ಸಚಿವರ ತರಾಟೆ!

**ಮಧುಗಿರಿ:** ರಸ್ತೆಯಲ್ಲಿ ಶಾಲೆ ಮಕ್ಕಳು ಕೈ ತೋರಿಸಿ ಮನವಿ ಮಾಡಿದರೂ ಬಸ್ ನಿಲ್ಲಿಸದೇ ಸಾಗಿದ ಕೆಎಸ್‌ಆರ್‌ಟಿಸಿ ಬಸ್ಸನ್ನು ಹಿಂಬಾಲಿಸಿ ಅಡ್ಡಗಟ್ಟಿದ ಸಚಿವ ಸುರೇಶ್‌ಕುಮಾರ್ ಬಸ್ ಚಾಲಕನಿಗೆ ರಸ್ತೆಯಲ್ಲೇ ತರಾಟೆ ತೆಗೆದುಕೊಂಡಿದ್ದಾರೆ. ತಾಲೂಕಿನ ಡಿ.ನಾಗೇನಹಳ್ಳಿಯಲ್ಲಿ ಬಸ್ ನಿಲುಗಡೆಗೆ ಅವಕಾಶವಿದ್ದರೂ ಪಾಸ್ ಹೊಂದಿರುವ ಮಕ್ಕಳೆಂಬ ಕಾರಣಕ್ಕೆ ಬಸ್‌ಗಳನ್ನು ನಿಲ್ಲಿಸದೇ ಮುಂದೆ ಸಾಗಿ ವಿದ್ಯಾರ್ಥಿಗಳಿಗೆ ದಿನವೂ ತೊಂದರೆ ನೀಡುವ ಚಾಲಕರ ಕೃತ್ಯವನ್ನು ಶನಿವಾರ ಶಿಕ್ಷಣ ಸಚಿವರೇ ಕಣ್ಣಾರೆ ಕಂಡರು.



ರಾಜ್ಯ ಹೆದ್ದಾರಿ ದಾಬಸ್ ಪೇಟೆ-ಕೊರಟಗೆರೆ ಮಾರ್ಗವಾಗಿ ಮಧುಗಿರಿಗೆ ತೆರಳುತ್ತಿದ್ದ ಸಚಿವ ಸುರೇಶ್‌ಕುಮಾರ್, ಬಸ್ ಹಿಂಬಾಲಿಸಿ ವಡ್ಡರಹಳ್ಳಿ ಬಳಿ ಅಡ್ಡಗಟ್ಟಿ ನಿಲ್ಲಿಸಿದರು. ಬಸ್ ಏಕೆ ನಿಲ್ಲಿಸಲಿಲ್ಲ? ನಿಮ್ಮ ಮಕ್ಕಳಿಗೂ ಯಾರಾದರೂ ಹೀಗೆ ಮಾಡಿದರೆ ಹೇಗೆ? ಮಕ್ಕಳ ಬಳಿ ಪಾಸ್ ಇದೆ, ಅವರನ್ನು ಕರೆದುಕೊಂದು ಹೋಗುವುದು ನಿಯಮ, ಇದನ್ನು ಸರಿಯಾಗಿ ಪಾಲಿಸಬೇಕು.. ಎಂದು ತರಾಟೆಗೆ ತೆಗೆದುಕೊಂಡರು.

ಚಾಲಕ ಕ್ಷಮೆಕೋರಿ ತಪ್ಪು ತಿದ್ದಿಕೊಳ್ಳುವುದಾಗಿ ಹೇಳಿದರು. ಗ್ರಾಮೀಣ ಭಾಗದಲ್ಲಿ ಶಾಲೆ-ಕಾಲೇಜುಗಳಿಗೆ ತೆರಳಲು ಅನುಕೂಲವಾಗುವಂತೆ ಬಸ್‌ಗಳ ಕಡ್ಡಾಯ ನಿಲುಗಡೆ ಬಗ್ಗೆ ಸಾರಿಗೆ ಸಚಿವರ ಜತೆ ಚರ್ಚಿಸುವುದಾಗಿ ಸಚಿವರು ಹೇಳಿದರು.